**ಸಾಕ್ಷಿಗೆ ದಿನಾಂಕಃ17-08-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**
**ಮುಂದುವರಿದ ಪಾಟೀ ಸವಾಲುಃ ಎದುರುದಾರರ ಪರ ಃ ಶ್ರೀ ಪಿ ಕೆ ವಕೀಲರಿಂದ-**

1 ನೇ ಎದುರುದಾರನ ಹೆಸರಿನಲ್ಲಿ ನಾನು ಹೇಳುವಂತೆ ಯಾವುದೇ ಟಿಲ್ಲರ್ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರನ ಬಳಿ ಇರುವ ಕೃಷಿ ಭೂಮಿಯಲ್ಲಿರುವ ಅಡಿಕೆ ತೋಟಕ್ಕೆ ರೋಗ ಹಿಡಿದಿರುತ್ತದೆ ಎಂದರೆ ಸರಿಯಲ್ಲ. ಅದರಿಂದ 1 ನೇ ಎದುರುದಾರನಿಗೆ ಕೃಷಿಯಿಂದ ಸಾಕಷ್ಟು ಆದಾಯ ಪ್ರಸ್ತುತ ಬರುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ನೇ ಎದುರುದಾರನಿಗೆ ಆತನ ಜಮೀನಿನಲ್ಲಿರುವ ಕಾಫಿ ಮತ್ತು ಕಾಣು ಮೆಣಸು ಬೆಳೆಗಳಿಂದ ಒಳ್ಳೆಯ ಆಧಾರ ಇಂದಿಗೂ ಬರುತ್ತದೆ ಎಂದು ನುಡಿದಿರುತ್ತಾರೆ. 1 ನೇ ಎದುರುದಾರರು ಯಾವುದೇ ಕಾಫಿ ಅಥವಾ ಕಾಣುಮೆಣಸು ಬೆಳೆಗಳನ್ನು ತನ್ನ ಜಮೀನಿನಲ್ಲಿ ಬೆಳೆಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರನಿಗೆ ವಯಸ್ಸಾಗಿರುವ ಕಾರಣ ಆತನ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಹಣದ ಖರ್ಚು ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಹೇಳಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. 1 ನೇ ಎದುರುದಾರನಿಗೆ ಅವರ ಕೃಷಿ ಭೂಮಿಯಲ್ಲಿ ಕೃಷಿ ಮಾಡುವಷ್ಟು ದೈಹಿಕ ಸಾಮರ್ಥ್ಯ ಇಲ್ಲ ಎಂದರೆ ಸಾಕ್ಷಿಯು ನಾನು ಮನೆಯಿಂದ ಹೊರಗೆ ಬಂದು 5 ವರ್ಷವಾಗಿರುವ ಕಾರಣ ನನಗೆ ಅದರ ಬಗ್ಗೆ ಈಗ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

2. ನನಗೆ ಮಾನಸಿಕ ಸಂಬಂಧಿ ಕಾಯಿಲೆಗಳು ಇರುತ್ತವೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧ ಪಟ್ಟಂತೆ 1 ನೇ ಎದುರುದಾರರು ನನಗೆ ಚಿಕಿತ್ಸೆಯನ್ನು ಸಹ ಕೊಡಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನನ್ನು ಬಲತ್ಕಾರದಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಹಲವು ವರ್ಷಗಳಿಂದ 1 ನೇ ಎದುರುದಾರರ ಮತ್ತು ಅವರ ಕುಟುಂಬದವರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಷ್ಟು 1 ನೇ ಎದುರುದಾರನಿಗೆ ಜೀವನಾಂಶ ನೀಡಲು ಆರ್ಥಿಕ ಸಾಮರ್ಥ್ಯ ಇಂದಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಉದ್ಯೋಗದಲ್ಲಿದ್ದು, ನನ್ನ ತವರು ಮನೆ ಕಡೆಯಿಂದ ಒಳ್ಳೆಯ ಆರ್ಥಿಕ ಪರಿಸ್ಥಿತಿ ಇರುವ ಕಾರಣ ನನಗೆ ಜೀವನಾಂಶದ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರನಿಗೆ ಮತ್ತು ಅವರ ಕುಟುಂಬದವರಿಗೆ ತೊಂದರೆ ನೀಡುವ ಒಂದೇ ಉದ್ದೇಶದಿಂದ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನನ್ನ ಗಂಡ ನನಗೆ-

ತೊಂದರೆ ನೀಡಿರುವ ಕಾರಣ ಹಾಗೂ ಜೀವನಾಂಶ ನೀಡಿರುವ ಕಾರಣ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದು ನುಡಿದಿರುತ್ತಾರೆ.

3. ಮದುವೆಯಾದ ನಂತರದಲ್ಲಿ ನಾನು ಮತ್ತು 1 ನೇ ಎದುರುದಾರ ಪ್ರತ್ಯೇಕವಾಗಿ ವಾಸವಿದ್ದ ಮನೆಯಿಂದ 1 ನೇ ಎದುರುದಾರನ ತಂದೆಯ ಮನೆ ಸುಮಾರು 5 ಕಿ.ಮೀ ದೂರದಲ್ಲಿ ಇತ್ತು ಎಂದರೆ ಸರಿ. 1 ನೇ ಎದುರುದಾರನ ತಮ್ಮ 2 ನೇ ಎದುರುದಾರರು ತನ್ನ ತಂದೆಯ ಮನೆಯಲ್ಲಿಯೇ ವಾಸವಿದ್ದರು ಎಂದರೆ ಸರಿ. 2 ನೇ ಎದುರುದಾರರು ನಾನು ಮತ್ತು 1 ನೇ ಎದುರುದಾರರು ಪ್ರತ್ಯೇಕವಾಗಿ ವಾಸವಿದ್ದ ಮನೆಗೆ ಯಾವತ್ತೂ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಕಳೆದ 5 ವರ್ಷದಿಂದ ನನಗೆ ಹಾಗೂ 2 ನೇ ಎದುರುದಾರನ ನಡುವೆ ಯಾವುದೇ ಭೇಟಿ ಅಥವಾ ಮಾತು-ಕತೆ ಆಗಿರುವುದಿಲ್ಲ. ಅದೇ ರೀತಿ 1 ನೇ ಎದುರುದಾರರು 2 ನೇ ಎದುರುದಾರರಿಗೆ ಕಳೆದ 5 ವರ್ಷದಲ್ಲಿ ಭೇಟಿಯಾಗಿರುತ್ತಾರೋ ಅಥವಾ ಇಲ್ಲವೋ ನನಗೆ ವೈಯುಕ್ತಿಕವಾಗಿ ಗೊತ್ತಿಲ್ಲ.

4. ನಾನು ಹೇಳುವಂತೆ 1 ನೇ ಎದುರುದಾರರು ನನ್ನನ್ನು ಯಾವತ್ತೂ ಮನೆಯಿಂದ ಹೊರಗೆ ದೂಡಿರುವುದಿಲ್ಲ ಮತ್ತು ನಾನೇ ಸ್ವತಃ ಮನೆ ಇಂದ ಹೊರಗೆ ಹೋಗಿರುತ್ತೇನೆ ಎಂದರೆ ಸಾಕ್ಷಿಯು ನಾನು ಪ್ರಾಣ ಭಯದಿಂದ ಮನೆಯಿಂದ ಹೊರಗೆ ಹೋಗಿರುತ್ತೇನೆ ಎಂದು ನುಡಿದಿರುತ್ತಾರೆ. ಇಂದಿಗೂ ಸಹ 1 ನೇ ಎದುರುದಾರರು ಆತನ ಕೃಷಿ ಜಮೀನಿನಲ್ಲಿ ಅರ್ಧಾಂಶವನ್ನು ನನಗೆ ಹಾಗೂ ನನ್ನ ಮಕ್ಕಳಿಗೆ ಅದನ್ನು ನಿರ್ವಹಣೆ ಮಾಡಿ, ಆದಾಯವನ್ನು ಪಡೆದುಕೊಳ್ಳಲು ಮತ್ತು ಸ್ವಾಧೀನ ನೀಡಲು ತಯಾರಿರುತ್ತಾರೆ ಎಂದರೆ ಸಾಕ್ಷಿಯು ನಾನು ಅಶಕ್ತಳಾಗಿರುವ ಕಾರಣ ನನಗೆ ಕೃಷಿ ಜಮೀನಿನಲ್ಲಿ ದುಡಿಯಲು ಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ. 1 ನೇ ಎದುರುದಾರನ ಜಮೀನಿನಲ್ಲಿ ಯಾವುದೇ ಆದಾಯ ಪಡೆಯಲು ಸಾಧ್ಯವಿರುವುದಿಲ್ಲ ಎನ್ನುವ ವಿಷಯ ನನಗೆ ತಿಳಿದಿದ್ದು, ಅದರಂತೆ ನಾನು ಬೇಡ ಎಂದು ನುಡಿಯುತ್ತಿದ್ದೇನೆ ಹೊರತು ನಾನು ಹೇಳುವ ಕಾರಣದಿಂದ ಅಲ್ಲ ಎಂದರೆ ಸರಿಯಲ್ಲ.

5. ನನ್ನ 2 ನೇ ಮಗಳಿಗೆ 1 ನೇ ಎದುರುದಾರ ಜೀವನಾಂಶ ನೀಡಬೇಕೆಂದು ಕೋರಿ ನಾನು ಶೃಂಗೇರಿ ಕಾನೂನು ಸೇವಾ ಪ್ರಾಧಿಕಾರಕ್ಕೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯೂ ಇನ್ನೂ ಸಹ ವಿಚಾರಣ ಹಂತದಲ್ಲಿ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ಅರ್ಜಿಯನ್ನು ನಾನು ನನ್ನ 2 ನೇ ಮಗಳ ಕೈಯಿಂದ ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಸದರಿ ಅರ್ಜಿಯನ್ನು ನನ್ನ 2 ನೇ ಮಗಳೇ ಸ್ವತಃ ಸಲ್ಲಿಸಿರುತ್ತಾಳೆ ಎಂದು ನುಡಿದಿರುತ್ತಾರೆ.

ಪ್ರಸ್ತುತ ಪ್ರಕರಣದಲ್ಲಿ ನನಗೆ ಹಾಗೂ ನನ್ನ 2ನೇ ಮಗಳಿಗೆ ಸೇರಿಸಿ 1 ನೇ ಎದುರುದಾರರಿಂದ ಜೀವನಾಂಶವನ್ನು ಕೋರಿರುತ್ತೇನೆ. ನನ್ನ 2ನೇ ಮಗಳು ಪ್ರಸ್ತುತ ಶೃಂಗೇರಿಯ ಸರ್ಕಾರಿ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ ವಿಧ್ಯಾ,ಬ್ಯಾಸ ಮಾಡುತ್ತಿದ್ದಾಳೆ. ನನ್ನ 2ನೇ ಮಗಳಿಗೆ ಪ್ರಸ್ತುತ 17 ವರ್ಷ ವಯಸ್ಸಾಗಿರುತ್ತದೆ. ಸರ್ಕಾರಿ ಕಾಲೇಜಿನಲ್ಲಿ ವಿಧ್ಯಾಭ್ಯಾಸದ ಯಾವುದೇ ಶುಲ್ಕ ಪಡೆಯುವುದಿಲ್ಲ ಎಂದರೆ ಸರಿ. ನಾನು ಪ್ರಸ್ತುತ ಕಿಗ್ಗಾದಲ್ಲಿರುವ ನನ್ನ ತಾಯಿಯ ಮನೆಯಲ್ಲಿ ವಾಸ ಇರುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ ನನ್ನ ಅರ್ಜಿಯಲ್ಲಿ ಕೇಳಿದಷ್ಟು ಖರ್ಚು-ವೆಚ್ಚದ ಅವಶ್ಯಕತೆ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇಳುವಷ್ಟು ಜೀವನಾಂಶ ನೀಡಲು 1ನೇ ಎದುರುದಾರ ಪ್ರಸ್ತುತ ಆರ್ಥಿಕವಾಗಿ ಶಕ್ತನಾಗಿರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಜೀವನಾಂಶ ಪಡೆಯುವ ಉದ್ದೇಶದಿಂದ 1ನೇ ಎದುರುದಾರರಿಗೆ ಹೆಚ್ಚಿನ ಆದಾಯ ಇರುವುದಾಗಿ ನಾನು ಅರ್ಜಿಯಲ್ಲಿ ಮತ್ತು ದೂರಿನಲ್ಲಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-13 ದೂರಿನಲ್ಲಿ ನಾನು ಹೇಳಿರುವ ಅಂಶಗಳು ಎಲ್ಲಾ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ17-08-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**
**ಪ್ರ.ದ.ನ್ಯಾ.ದಂಃ ಶೃಂಗೇರಿ**